# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ:
ನಂ-29, ವಿಜಯನಗರ 2ನೇ
ಹಂತ, ಹಿನಕಲ್, ಮೈಸೂರು-
5700117
ವೆಬ್ ಸೈಟ್: www.cescmysore.org

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಚಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seeommys@gmail.com


ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ ಆಸ-31 ದಿನಾಂಕ: 05.06.2017 8

## ಸಭೆಯ ನಡಾವಳಿಗಳು

ದಿನಾಂಕ 19/05/2017 ರಂದು ವಿರಾಜಪೇಟೆ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ.ಕೆ.ರಾಮಚಂದ್ರ : ಅಧೀಕ್ಷಕ ಇಂಜಿನಿಯರ್ (ವಿ), ಮೈಸೂರು ವೃತ್ತ.
2. ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
3. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ ಉಪವಿಭಾಗ.
4. ಶ್ರೀ.ಪಿ.ಎನ್.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ ವಿಭಾಗ.
5. ಶ್ರೀ.ವಿ.ಎಂ.ನಾಗರಾಜು : ಲೆಕ್ಕಾಧಿಕಾರಿಗಳು, ಮಡಿಕೇರಿ ವಿಭಾಗೀಯ ಕಛೇರಿ.
6. ಶ್ರೀ.ಎ.ಎ.ದಿನೇಶ್ : ಲೆಕ್ಕಾಧಿಕಾರಿಗಳು, (ಆಂ.ಲೆ.ಪ), ಮಡಿಕೇರಿ ವಿಭಾಗೀಯ ಕಛೇರಿ.
7. ಶ್ರೀ.ಶಿವನಗೌಡ ಪಾಟೀಲ : ಸಹಾಯಕರು ಇಂಜಿನಿಯರ್(ವಿ), ವಿರಾಜಪೇಟೆ ಶಾಖೆ.
8. ಶ್ರೀ.ಎಚ್.ಎಸ್.ರಮೇಶ್ : ಕಿರಿಯ ಇಂಜಿನಿಯರ್(ವಿ), ಅಮ್ಮತ್ತಿ ಶಾಖೆ.
9. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ತಾಂ), ವಿರಾಜಪೇಟೆ ಉಪವಿಭಾಗ.
10. ಶ್ರೀ.ಎನ್.ಟಿ.ಮಾದಯ್ಯ : ಕಿರಿಯ ಇಂಜಿನಿಯರ್(ವಿ), ಪಾಲಿಬೆಟ್ಟ ಶಾಖೆ.

ನಂ. 791
12/6/17

ಸಭೆಯಲ್ಲಿ ವಿರಾಜಪೇಟೆ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1 | ಶ್ರೀಮತಿ.ಕಾಳಮಂಡ ತಂಗಮ್ಮ ಅರಮೇರಿ ಗ್ರಾಮ ಮತ್ತು ಕದನೂರು ಅಂಚೆ. | * ಅರಮೇರಿ ಗ್ರಾಮದಲ್ಲಿ ರಸ್ತೆ ವಿಸ್ತೀರ್ಣ ಮಾಡುವ ಸಂಧರ್ಭದಲ್ಲಿ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲಾಗಿದ್ದು ತಮ್ಮ ಮನೆಯ ಮೇಲೆ ವಿದ್ಯುತ್ ತಂತಿ ಎಳೆಯಲಾಗಿದ್ದು ಅದನ್ನು ಸ್ಥಳಾಂತರಿಸುವಂತೆ ಕೋರಿದರು ಮತ್ತು ತಮ್ಮ ಮನೆಯ ಪಕ್ಕದ ಮನೆಯ ಸೇವಾ ಮಾರ್ಗವು ರಸ್ತೆಗೆ ಅಡ್ಡಲಾಗಿ ಎಳೆದಿದ್ದು ಸಾರ್ವಜಕರಿಗೆ ತೊಂದರೆಯಾಗುತ್ತಿದ್ದು ಕೂಡಲೇ ಅವುಗಳನ್ನು ಸ್ಥಳಾಂತಸರಿಸಿ ಬೇರೆ ಮಾರ್ಗದಿಂದ ವಿದ್ಯುತ್ ನೀಡುವಂತೆ ಕೇಳಿಕೊಂಡರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು. |
| | | * ವಿರಾಜಪೇಟೆ ಸಾರ್ವಜನಿಕ ಹಿತರಕ್ಷಣಾ ಸಮಿತಿ ಕಛೇರಿಯಲ್ಲಿ | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಪ್ರತೀ ತಿಂಗಳು ನಿಗಧಿತ ದಿನಾಂಕಗಳಂದು ಸಂಭಂಧಪಟ್ಟ ಗ್ರಾಹಕರಿಗೆ |

| | | | |
|---|---|---|---|
| | | ಮಾಪಕ ಓದುಗರು ರೀಡಿಂಗ್ ನೋಡದೆ ಬಿಲ್ ನೀಡುತ್ತಿರುವುದಾಗಿ ತಿಳಿಸಿದು. | ಮಾಸಿಕ ವಿದ್ಯುತ್ ಬಿಲ್‌ಗಳನ್ನು ಒದಗಿಸಲು ಸಂಭಂಧಪಟ್ಟ ಮಾಪಕ ಓದುಗರಿಗೆ ತಿಳಿಸಿ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು. |
| 2 | ಶ್ರೀ.ಚೇಕು | * ಆರ್ಜಿ ಕಲುಬಾಣೆ ಗ್ರಾಮದಲ್ಲಿ ಕುಡಿಯುವ ನೀರು ಸರಬಾಜು ಯೋಜನೆಗೆಂದು ಮೂರು ತಿಂಗಳಿನಿಂದ ಕಂಬಗಳನ್ನು ಮಾತ್ರ ನಿಲ್ಲಿಸಿದ್ದು ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವ ಬಗ್ಗೆ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಿದರು. | * ಇದಕ್ಕೆ ಉತ್ತರಿಸದ ಅಧೀಕ್ಷಕ ಇಂಜಿನಿಯರ್(ವಿ), ಸಂಭಂಧಪಟ್ಟ ವಿದ್ಯುತ್ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸುವಂತೆ ನೋಟೀಸ್ ಜಾರಿ ಮಾಡಿ ಕಾಮಗಾರಿಯನ್ನು ನಿಗಮದ ನಿಯಮಾನುಸಾರ ಪೂರ್ಣಗೊಳಿಸಲು ಅವಶ್ಯ ಕ್ರಮ ತೆಗೆದುಕೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ), ವಿರಾಜಪೇಟೆ ರವರಿಗೆ ಸೂಚಿಸದರು. ಮುಂದುವರಿದು ಸ.ಕಾ.ನಿ.ಇಂಜಿನಿಯರ್ (ವಿ), ವಿರಾಜಪೇಟೆರವರು ಮಾತನಾಡುತ್ತಾ ವಿರಾಜಪೇಟೆ ಉಪವಿಭಾಗ ವ್ಯಾಪ್ತಿಯ ಎಲ್ಲಾ ಕುಡಿಯುವ ನೀರಿನ ಸ್ಥಾವರಗಳು ಹಾಗು ಗಂಗಾ ಕಲ್ಯಾಣ ಯೋಜನೆ ಕೃಷಿ ನೀರಾವರಿ ಪಂಪ್ ಸೆಟ್‌ಗಳನ್ನು ವಿದ್ಯುದ್ಧೀಕರಣಗೊಳಿಸುವ ಕಾಮಗಾರಿಯನ್ನು ಮೆ:ವಿಟಿಎಸ್‌ಟಿ ಸಂಸ್ಥೆಯವರಿಗೆ ವಹಿಸಲಾಗಿದ್ದು, ಸದರೀ ಸಂಸ್ಥೆಯ ವತಿಯಿಂದ ವಿರಾಜಪೇಟೆ ಪಟ್ಟಣ ಸಮೀಪ ಕಲ್ಲುಬಾಣೆ ಭಾಗದಲ್ಲಿ ಕುಡಿಯುವ ನೀರಿನ ಸ್ಥಾವರ ವಿದ್ಯುದ್ಧೀಕರಣಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದು ಸದರೀ ಗುತ್ತಿಗೆದಾರರು ಕೇವಲ ಕಂಬಗಳನ್ನು ಮಾತ್ರ ಅಳವಡಿಸಲಾಗಿದ್ದು ವಾಹಕಗಳನ್ನು ಎಳೆದಿರುವುದಿಲ್ಲ ಹಾಗು ಈ ವಿಷಯವನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದಿರುವುದಾಗಿ ತಿಳಿಸಿದರು. |
| | | * ವಿರಾಜಪೇಟೆ ಕಲ್ಲುಬಾಣೆ ಪ್ರದೇಶವನ್ನು ಪಟ್ಟಣ ಫೀಡರ್‌ಗೆ ಸೇರಿಸುವಂತೆ ತಿಳಿಸಿದರು. | ಕಲ್ಲುಬಾಣೆ ಪ್ರದೇಶದ ಗ್ರಾಹಕರನ್ನು ವಿರಾಜಪೇಟೆ ಪಟ್ಟಣದ ಫೀಡರ್‌ಗೆ ಸೇರಿಸಲು ಐಪಿಡಿಎಸ್ ಯೋಜನೆಯಡಿ ಈಗಾಗಲೇ ಮಂಜುರಾತಿ ದೊರೆತಿದ್ದು ಮುಂದುವರಿದು ಐಪಿಡಿಎಸ್ ಯೋಜನೆಯಡಿ 23 ಹೆಚ್ಚುವರಿ ಪರಿವರ್ತಕಗಳು ಮಂಜೂರಾಗಿದ್ದು ಸದರೀ ಕಾಮಗಾರಿನ್ನು ಈಗಾಗಲೇ ಟೆಂಡರ್ ಕರೆದು ಗುತ್ತಿಗೆ ನೀಡಲಾಗಿದ್ದು ಕಾಮಗಾರಿಯ ಆರಂಭಿಕ ಸರ್ವೆ ಕಾರ್ಯ ಮುಗಿದ ಬಳಿಕ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು. |
| | | * ವಿರಾಜಪೇಟೆ ಗಾಂಧಿನಗರದ ವೋಲ್ಟೇಜ್ ಸಮಸ್ಯೆಯನ್ನು ಪರಿಹರಿಸುವಂತೆ ತಿಳಿಸಿದರು. | ವಿರಾಜಪೇಟೆ ಗಾಂಧಿನಗರದ ವೋಲ್ಟೇಜ್ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಒಂದು ಹೆಚ್ಚುವರಿ 63 ಕೆವಿಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಕೇಂದ್ರ ನಿರ್ಮಿಸಲು ಅನುಮೋದನೆ ದೊರೆತ್ತಿದ್ದು ಕೆಲವು ಸಾಮಾಗ್ರಿಗಳ ಕೊರತೆಯಿರುವುದರಿಂದ ಸದರೀ ಕಾಮಗಾರಿ ವಿಳಂಭ ವಾಗುತ್ತಿರುವುದಾಗಿ ಸ.ಕಾ.ನಿ.ಇಂಜಿನಿಯರ್(ವಿ), ವಿರಾಜಪೇಟೆ ತಿಳಿಸಿದರು. |
| | | * ವಿರಾಜಪೇಟೆ ಪಟ್ಟಣದಲ್ಲಿ ನಿರ್ವಹಣಾ ಕೆಲಸ ಮಾಡುತ್ತಿರುವುದಾಗಿ ತಿಳಿಸಿ ಆಗಿಂದ್ದಾಗ್ಗೆ ವಿದ್ಯುತ್ ಕಡಿತಗೊಳಿಸುತ್ತಿರುವುದರಿಂದ ಗ್ರಾಹಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. | * ಪಟ್ಟಣದಲ್ಲಿ ವಿದ್ಯುತ್ ಅಡಚಣೆಯನ್ನು ಮಿತಿಗೊಳಿಸಲು ಅಲ್ಲಲ್ಲಿ ಜಿ.ಓ.ಎಸ್ ಅಳವಡಿಸಲು ತಕ್ಷಣವೇ ಕೊಳ್ಳೆಗಾಲ ವಿಭಾಗದಿಂದ ಪಡೆದುಕೊಂಡು ಅವಶ್ಯ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು. |
| | | * ಅಮ್ಮತ್ತಿ ಶಾಖಾ ವ್ಯಾಪ್ತಿಯ ಹಾಲುಗುಂದ ಗ್ರಾಮದ ಅನಿಯಮಿತ ವಿದ್ಯುತ್ ಅಡಚಣೆಯನ್ನು ನಿವಾರಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. | * ಅಮ್ಮತ್ತಿ ಫೀಡರ್‌ನಲ್ಲಿ ಅತೀವ ವಿದ್ಯುತ್ ಅಡಚಣೆಯಾಗುತ್ತಿದ್ದು, ಚೆಂಬೆಬೆಳ್ಳೂರು ಹಾಗು ಹಾಲುಗುಂದ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಪ್ರತ್ಯೇಕ ಫೀಡರ್ ನಿರ್ಮಿಸಲು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಮಂಜೂರಾತಿಗಾಗಿ ಸಲ್ಲಿಸಲಾಗುವುದೆಂದು ಸ.ಕಾ.ನಿ.ಇಂಜಿನಿಯರ್(ವಿ), ವಿರಾಜಪೇಟೆ ತಿಳಿಸಿದರು. ವಿರಾಜಪೇಟೆ ಉಪವಿಭಾಗದ ಗ್ರಾಮಾಂತರ ಪ್ರದೇಶಗಳಲ್ಲಿ ಉಂಟಾಗುತ್ತಿರುವ |

| | | | |
|---|---|---|---|
| | | | ಅಡಚಣೆ ಮಿತಿಗೊಳಿಸಲು ಹೆಚ್ಚುವರಿ ಫೀಡರ್‌ಗಳ ನಿರ್ಮಾಣ ಕಾರ್ಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಧೀನ್ ದಯಾಳ್ ಗ್ರಾಮ ವಿದ್ಯುತ್ ಯೋಜನೆಯಡಿ ಮಂಜೂರಾತಿ ದೊರಕಿದ್ದು, ಕಾಮಗಾರಿಯ ಸರ್ವೆ ಕಾರ್ಯ ನಡೆಸಲಾಗುತ್ತಿದೆಯೆಂದು ತಿಳಿಸಿದರು. |
| 3 | ಡಿ.ಎಲ್.ಸುಬ್ಬಯ್ಯ ಸಲಹಾ ಸಮಿತಿ ಸದಸ್ಯರು, ವಿರಾಜಪೇಟೆ | * ಸಕಾಲದಲ್ಲಿ ಗ್ರಾಹಕರಿಗೆ ವಿದ್ಯುತ್ ಬಿಲ್ ಒದಗಿಸದೇ ಇರುವ ಬಗ್ಗೆ ತಮ್ಮ ಅತೃಪ್ತಿ ವ್ಯಕ್ತಪಡಿಸಿ ಸಾಮಾನ್ಯ ಗ್ರಾಹಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು.<br><br>* ಎಲ್ಲಾ ಪಂಚಾಯ್ತಿ ವ್ಯಾಪ್ತಿಗಳಲ್ಲಿ ಮಾಸಿಕ ವಿದ್ಯುತ್ ಬಿಲ್ ವಸೂಲಾತಿ ಮಾಡುವಂತೆ ಕೇಳಿಕೊಂಡರು.<br><br>* ಮಾಪಕ ಓದುವ ಕಾರ್ಯವನ್ನು ನಿಗಮದ ನೌಕರರಿಂದಲೇ ಮಾಡಿಸುವಂತೆ ಮತ್ತು ಅವಶ್ಯವಿದ್ದಲ್ಲಿ ಹೆಚ್ಚುವರಿ ನೌಕರರನ್ನು ನಿಯೋಜಿಸುವಂತೆ ಕೋರಿದರು.<br><br>* ಮಳೆಗಾಲದಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಹಾಗೂ ಸಿಬ್ಬಂದಿಗಳಿಗೆ ಅಗತ್ಯ ಸುರಕ್ಷ ಸಲಕರಣೆಗಳನ್ನು ಮಳೆಗಾಲಕ್ಕೂ ಮುನ್ನ ಒದಗಿಸುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ (ವಿ) ರವರು ಮಾತನಾಡುತ್ತಾ ಜೂನ್ ತಿಂಗಳಿನಿಂದ ಮಾಪಕ ಓದುವ ಕಾರ್ಯದಲ್ಲಿ ಪ್ರಗತಿ ಕಾಣಲಿದ್ದು ಎಲ್ಲಾ ಗ್ರಾಹಕರಿಗೂ ಮಾಸಿಕ ಬಿಲ್ಲುಗಳನ್ನು ನಿಗಧಿತ ದಿನಾಂಕಗಳಂದು ಒದಗಿಸಲು ಅವಶ್ಯ ಕ್ರಮ ತೆಗೆದುಕೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು.<br><br>* ಅಂಚೆ ಕಛೇರಿ ಮುಖಾಂತರ ವಿದ್ಯುತ್ ಬಿಲ್ ಪಾವತಿಸಲು ಅವಕಾಶವಿದ್ದು ಅದನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು. ಮುಂದುವರಿದು ಸ.ಕಾ.ನಿ.ಇಂಜಿಯರ್(ವಿ) ರವರು ಈಗಾಗಲೇ ಸಿಬ್ಬಂದಿಗಳ ಕೊರತೆಯಿರುವುದರಿಂದ ಎಲ್ಲಾ ಪಂಚಾಯ್ತಿಗಳಿಗೆ ವಸೂಲಾತಿಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲವಾಗಿ ತೀಳಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಈಗಾಗಲೇ ಮಾಪಕ ಓದುವ ಕಾರ್ಯವನ್ನು ಖಾಸಗಿ ಸಂಸ್ಥೆಯೊಂದಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದೆ ಹಾಗು ಹೊಸ ಸಿಬ್ಬಂದಿಗಳ ನೇಮಕ ಮಾಡಿಕೊಳ್ಳುವ ಅಧಿಕಾರ ತಮಗಿಲ್ಲವೆಂದು ಹಾಗೂ ಇದರ ಬಗ್ಗೆ ಮೇಲಧಿಕಾರಿಗಳಿಗೆ ಶಿಫಾರಸು ಮಾಡುವುದಾಗಿ ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಗುತ್ತಿಗೆ ಆಧಾರದಲ್ಲಿ ಗ್ಯಾಂಗ್‌ಮೆನ್ ಗಳನ್ನು ತೆಗೆದುಕೊಳ್ಳಲು ಹಾಗೂ ಮಳೆಗಾಲದಲ್ಲಿ ಅವರನ್ನು ಮುಂದುವರಿಸುವಂತೆ ಪತ್ರ ರವಾನಿಸಲು ಕಾ.ನಿ.ಇಂಜಿನಿಯರ್(ವಿ), ಮಡಿಕೇರಿ ರವರಿಗೆ ಸೂಚಿಸಿದರು.<br><br>ಮುಂದುವರಿದು ಉಗ್ರಾಣದಲ್ಲಿ ಲಭ್ಯವಿರುವ ಸುರಕ್ಷತಾ ಸಾಮಾಗ್ರಿಗಳನ್ನು ಪಡೆದುಕೊಳ್ಳುವಂತೆ ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 4 | ಮಾಲೇಟಿರ ಸುಬ್ಬಯ್ಯ, ಕೆದಮುಳ್ಳೂರು ಗ್ರಾಮ ಮತ್ತು ಅಂಚೆ. | * ಕೆದಮುಳ್ಳೂರು ಗ್ರಾಮದಲ್ಲಿ 15 ವರ್ಷಗಳಿಂದ ಕೆದಮುಳ್ಳೂರು ಮತ್ತು ಬೇತ್ರಿ ಗ್ರಾಮಕ್ಕೆ ಒಂದೇ ವಿದ್ಯುತ್ ಫೀಡರ್ ಇರುವುದರಿಂದ ವಿದ್ಯುತ್ ಅಡಚಣೆ ಹೆಚ್ಚಾಗಿರುವುದರಿಂದ ಹೊಸ ಫೀಡರ್ ಮಾಡುವಂತೆ ಕೇಳಿಕೊಂಡರು.<br><br>* ಮಳೆಗಾಲದಲ್ಲಿ ಹೆಚ್ಚಿನ ವಿದ್ಯುತ್ ಕಂಬಗಳು ಮುರಿಯುವುದರಿಂದ ಆಯಾ ಗ್ರಾಮದಲ್ಲಿಯೇ ಹೊಸ ಕಂಬಗಳನ್ನು ಇಳಿಸುವಂತೆ ಕೇಳಿಕೊಂಡರು.<br><br>* ಪಾಲಂಗಾದಲ್ಲಿ ವಿದ್ಯುತ್ ಆಘಾತದಿಂದ ತಮ್ಮ ಹಸುವೊಂದು ಮೃತಪಟ್ಟಿದ್ದು 2 ವರ್ಷವಾದರೂ ಪರಿಹಾರ ಸಿಗದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. | * ಇದಕ್ಕೆ ಉತ್ತರಿಸಿದ ಸ.ಕಾ.ನಿ.ಇಂಜಿನಿಯರ್(ವಿ), ವಿರಾಜಪೇಟೆ, ರವರು ದೀನ್ ದಯಾಳ್ ವಿದ್ಯುತ್ ಯೋಜನೆಯಡಿಯಲ್ಲಿ ಪ್ರತ್ಯೇಕ ಫೀಡರ್‌ಗೆ ಮಂಜೂರಾತಿ ದೊರೆತಿದ್ದು ಶೀಘ್ರದಲ್ಲಿಯೇ ಸದರೀ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು.<br><br>* ಮಳೆಗಾಲದ ತುರ್ತು ಪರಿಸ್ಥಿತಿಯಲ್ಲಿ ಗ್ರಾಮಗಳಿಗೆ ಕಂಬಗಳನ್ನು ಬದಲಾಯಿಸಲು ಅನುಕೂಲವಾಗುವಂತೆ ಈಗಾಗಲೇ ಎಲ್ಲಾ ಶಾಖಾ ಕಛೇರಿ ಆವರಣದಲ್ಲಿ ಕಂಬಗಳನ್ನು ಒದಗಿಸಲಾಗುತ್ತಿದೆಯೆಂದು ಸ.ಕಾ.ನಿ.ಇಂಜಿನಿಯರ್(ವಿ) ರವರು ತಿಳಿಸಿದರು.<br><br>* ವಿದ್ಯುತ್ ಆಘಾತದಿಂದ ಹಸುವು ಮೃತಪಟ್ಟಿರುವುದಕ್ಕೆ ಪರಿಹಾರ ಒದಗಿಸುವ ವಿಚಾರಕ್ಕೆ ಸಂಭಂಧಿಸಿದಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ದೂರವಾಣಿ ಮುಖಾಂತರ ತಮ್ಮ ಆಪ್ತ ಸಹಾಯಕರಿಗೆ ತಕ್ಷಣವೇ ಪರಿಹಾರ ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು. |

| | | | |
|---|---|---|---|
| 5 | ಪಿ.ಎ.ದೇವಯ್ಯ ಕುಕ್ಲೂರು ಗ್ರಾಮ, ಕೊಡವ ಸಮಾಜ ಹತ್ತಿರ, ವಿರಾಜಪೇಟೆ | * ತಮ್ಮ ಕಾಫಿ ತೋಟದಲ್ಲಿ ವಿದ್ಯುತ್ ಮಾರ್ಗವು ತೀರಾ ಕೆಳಮಟ್ಟದಲ್ಲಿದ್ದು ಸರಿಪಡಿಸುವಂತೆ ತಿಳಿಸಿದರು.<br><br>* ವಿರಾಜಪೇಟೆ ಪೂಮಾಲೆಮಂದ್ ಬಳಿ ವೋಲ್ಟೇಜ್ ಸಮಸ್ಯೆಯಿದ್ದು ಹೊಸ ಪರಿವರ್ತಕ ಅಳವಡಿಸುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ವಿರಾಜಪೇಟೆ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಮುಂದುವರಿದು ಆನೆ ಕಾರಿಡಾರ್ ಕಂಬಗಳು ಮಂಜುರಾತಿಗೊಂಡಿದ್ದು ಆದ್ಯತೆ ಮೇರೆಗೆ ತೀವ್ರ ಕೆಳಮಟ್ಟದಲ್ಲಿರುವ ಮಾರ್ಗವನ್ನು ಸರಿಪಡಿಸುವಂತೆ ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.<br><br>*ವಿದ್ಯುತ್ ವೋಲ್ಟೇಜ್ ಸಮಸ್ಯೆಗೆ ಹೊಸವಿದ್ಯುತ್ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ಸಲ್ಲಿಸಲು ಸೂಚಿಸಿದರು. |
| 6 | ಸಚಿನ್. ಸಹಾಯಕ ವ್ಯವಸ್ಥಾಪಕರು, ಕೋಟೆಬೆಟ್ಟ ತೋಟ, ಪಾಲಿಬೆಟ್ಟ | * ತಮ್ಮ ತೋಟದಲ್ಲಿರುವ ಸ್ಥಾವರಗಳಿಗೆ ಬೇಟಿ ನೀಡದೆ ಹಾಗು ನಿಗಧಿತ ದಿನಾಂಕ ವಿದ್ಯುತ್ ಬಿಲ್ ಒದಗಿಸದೇ ಇರುವುದರಿಂದ ತೋಟದ ಕಾರ್ಮಿಕರಿಗೆ ಹೊರೆಯಾಗುತ್ತರುವುದಾಗಿ ತಿಳಿಸಿ ಎಲ್ಲಾ ತಿಂಗಳು ನಿಗಧಿತ ದಿನಾಂಕಗಳಂದು ಬಿಲ್ ಒದಗಿಸುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) 01.06.2017 ರಿಂದ ಸ್ಥಳಕ್ಕೆ ಬಂದು ಸಕಾಲದಲ್ಲಿ ಬಿಲ್ ಒದಗಿಸುವ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿದರು. ಮುಂದುವರಿದು ಸ.ಕಾ.ನಿ.ಇಂಜಿನಿಯರ್(ವಿ) ರವರು ಪಾಲಿಬೆಟ್ಟ ಶಾಖಾಧಿಕಾರಿಗಳಿಗೆ ಸಂಬಂಧಪಟ್ಟ ಸ್ಥಾವರದ ಮಾಪಕ ಗಣಾಂಕವನ್ನು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದರು. |
| 7 | ದಾಮೋದರ ಆಚಾರ್ಯ, ಸಲಹಾ ಸಮಿತಿ ಸದಸ್ಯರು | * ಲೇಔಟ್ ಗಳಲ್ಲಿ ಪರಿವರ್ತಕಗಳ ಕೊರತೆಯಿಂದಾಗಿ ವೋಲ್ಟೇಜ್ ಸಮಸ್ಯೆಯಿರುವ ಬಗ್ಗೆ ಹಾಗೂ ಎಲ್ಲಾ ಕಟ್ ಪಾಯಿಂಟ್‌ಗಳಿಗೆ ಡಿ ಓ ಎಲ್ ಓ ಹಾಕುವಂತೆ ಹಾಗೂ ದೀನ್ ದಯಾಳ್ ಯೋಜನೆಯನ್ನು ಶೀಘ್ರ ಮುಗಿಸುವಂತೆ ತಿಳಿಸಿದರು. | * ಇದಕ್ಕೆ ಸ.ಕಾ.ನಿ ಇಂಜಿನಿಯರ್ (ವಿ) ಉತ್ತರಿಸುತ್ತ ಯಾವುದೇ ಲೇಔಟ್ ಗಳು ಅಧಿಕೃತವಾಗಿ ಮಂಜುರಾತಿಗೊಳ್ಳದೇ ರೆವೆನ್ಯೂ ಜಾಗದಲ್ಲಿ ಮನೆ ನಿರ್ಮಾಣ ಕಾರ್ಯ ಮಾಡುತ್ತಿರುವುದರಿಂದ ಪ್ರತ್ಯೇಕ ಪರಿವರ್ತಕಗಳನ್ನು ಲೇಔಟ್ ಗಳಿಗೆಂದು ಒದಗಿಸಲಾಗಿರುವುದಿಲ್ಲ.<br><br>ಅಧೀಕ್ಷಕ ಇಂಜಿನಿಯರ್ ರವರು ಮಾತನಾಡುತ್ತ ಶೀಘ್ರದಲ್ಲೆ ಡಿ.ಓ.ಎಲ್.ಓ ಹಾಗೂ ಜಿ.ಓ.ಎಸ್ ಗಳನ್ನು ಒದಗಿಸಲಾಗುವುದೆಂದು ತಿಳಿಸಿದರು ಮುಂದುವರಿದ ದೀನ್ ದಯಾಳು ಯೋಜನೆಯ ಸರ್ಕಾರಿ ಯೋಜನೆಯಾಗಿದ್ದು ಅತ್ಯಂತ ಶೀಘ್ರದಲ್ಲಿ ಮುಗಿಸುವುದಾಗಿ ತಿಳಿಸಿದರು. |
| 8 | ಗಾಯತ್ರಿ ನರಸಿಂಹ ಸಲಹಾ ಸಮಿತಿ ಸದಸ್ಯರು | * ವಿರಾಜಪೇಟೆ ಪಟ್ಟಣ ವ್ಯಾಪ್ತಿಯ ಹಲವೆಡೆ ಬೀದಿ ದೀಪಗಳಿಗೆ ಕಂಬ ಒದಗಿಸುವಂತೆ ಕೋರಿಕೊಂಡರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಬೀದಿ ದೀಪದ ಪಾಲನೆ ಹಾಗೂ ನಿರ್ವಹಣೆ ಪಟ್ಟಣ ಪಂಚಾಯ್ತಿ/ ಗ್ರಾಮ ಪಂಚಾಯ್ತಿ ಗಳಿಗೆ ಸಂಭಂಧಿಸಿದ್ದು ಸದರಿ ಕಾಮಗಾರಿಗಳನ್ನು ಪಟ್ಟಣ ಪಂಚಾಯ್ತಿ ವತಿಯಿಂದ ಮಾಡಿಕೊಳ್ಳುವಂತೆ ತಿಳಿಸಿದರು. |

ತಮ್ಮ ವಿಶ್ವಾಸಿ,

8/6/17

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿಗಾಗಿ.
7. ಹಿಆಸ/ಪ್ರಕ/ಕಡತ.